ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, ಬೆಂಗಳೂರು
Rajiv Gandhi University of Health Sciences, Karnataka, Bangalore
4th T Block, Jayanagar, Bangalore – 560 041

RGUHS/SWF-SSP/02/2024-25 25.10.2024

# ಸುತ್ತೋಲೆ

ವಿಷಯ: ಕೇಂದ್ರ ಪುರಸ್ಕೃತ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮ ದಡಿ ವಿದ್ಯಾರ್ಥಿಗಳು ಹಾಗೂ ಸಂಬಂಧಪಟ್ಟ ಶಾಲೆ/ಕಾಲೇಜಿನ Institution Nodal Officer ಗಳು ಕಡ್ಡಾಯವಾಗಿ ಬಯೋಮೆಟ್ರಿಕ್ ಇ-ದೃಡೀಕರಣ ಮಾಡುವ ಬಗ್ಗೆ

ಉಲ್ಲೇಖ: 1. ಸಮಾಜ ಕಲ್ಯಾಣ ಇಲಾಖೆ,ಸಹಾಯಕ ನಿರ್ದೇಶಕರು (ಗ್ರೇಡ್-1) ರವರ ಕಛೇರಿ ಪತ್ರದ ಸಂಖ್ಯೆ: ಸನಿ/ಸಕಇ/ಬೆಂ(ದ)/ಮೆ.ನಂ.ವಿವೇ&ಇತರೆ/ ಸಿ.ಆರ್-43/2024-25 ದಿನಾಂಕ: 26.09.2024.

2. ಸಮಾಜ ಕಲ್ಯಾಣ ಇಲಾಖೆ,ಸಹಾಯಕ ನಿರ್ದೇಶಕರು (ಗ್ರೇಡ್-1) ರವರ ಕಛೇರಿ ಪತ್ರದ ಸಂಖ್ಯೆ: ಸನಿ/ಸಕಇ/ಬೆಂ(ದ)/ಮೆ.ನಂ.ವಿವೇ&ಇತರೆ/ಸಿ.ಆರ್-43/2024-25 ದಿನಾಂಕ: 27 .09. 2024.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ಮತ್ತು (2) ರಂತೆ ಕೇಂದ್ರ ಪುರಸ್ಕೃತ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದಡಿಯಲ್ಲಿ ಸಂಯೋಜನೆಗೊಂಡಿರುವ ಎಲ್ಲಾ ಕಾಲೇಜುಗಳ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದ ಬಗ್ಗೆ ಮಾಹಿತಿ ಇರುವ ನುರಿತ ಅಧಿಕಾರಿಯನ್ನು Institution Nodal Officer/Nodal Officer ನೇಮಕ ಮಾಡಿ, ಸದರಿ ಅಧಿಕಾರಿಯ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿ ಮಾಡಿ ತಮ್ಮ ದೃಡೀಕರಣದೊಂದಿಗೆ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಸಲ್ಲಿಸಲು ಸೂಚಿಸಲಾಗಿದೆ ಬಯೋಮೆಟ್ರಿಕ್ ಮೂಲಕ ಇ-ದೃಡೀಕರಣ ನೀಡುವುದು ಕಡ್ಡಾಯವಾಗಿರುತ್ತದೆ. ಇಲ್ಲವಾದಲ್ಲಿ ತಮ್ಮ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಅರ್ಜಿಗಳನ್ನು ಸಂಬಂಧಪಟ್ಟ ಇಲಾಖೆಗೆ ಆನ್‌ಲೈನ್ ಮುಖೇನ Forward ಮಾಡಲು ಅವಕಾಶವಿರುವುದಿಲ್ಲವೆಂಬ ಮಾಹಿತಿಯನ್ನು ಈ ಮೂಲಕ ತಿಳಿಸಲಾಗಿದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ಅರ್ಹರಿರುವ ಎಲ್ಲಾ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಕ್ರಮವಹಿಸುವುದು ಹಾಗೂ ಅರ್ಜಿ ಸಲ್ಲಿಸಿದ ಎಲ್ಲಾ ವಿದ್ಯಾರ್ಥಿಗಳ Biometric e-kyc ಮಾಡಿಸುವುದು ಕಡ್ಡಾಯವಾಗಿದ್ದು. ಸದರಿ ಪ್ರಕ್ರಿಯೆಯನ್ನು ಕರ್ನಾಟಕ ಒನ್, ಗ್ರಾಮ ಒನ್ ಹಾಗೂ ಇ-ಅಡಳಿತ ಕೇಂದ್ರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ನಾಗರೀಕ ಸೇವಾ ಕೇಂದ್ರಗಳಲ್ಲಿಯೂ ಬಯೋಮೆಟ್ರಿಕ್ ಇ-ದೃಡೀಕರಣ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ ಎಲ್ಲಾ ವಿದ್ಯಾರ್ಥಿಗಳು Biometric e-kyc ಮಾಡಿಸಲು ಅಗತ್ಯ ಕ್ರಮವಹಿಸಬೇಕಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯನ್ನು ಸಂಪರ್ಕಿಸಬಹುದಾಗಿದೆ. ಮೇಲೆ ತಿಳಿಸಿರುವ ವಿಷಯವನ್ನು ತುರ್ತು ಎಂದು ಪರಿಗಣಿಸಬೇಕೆಂದು ಸೂಚಿಸಲಾಗಿದೆ.

(Approved in E-75415, Note#4 on 29.10.2024)

ಕುಲಸಚಿವರು

ಗೆ,

ಡೀನ್ ಮತ್ತು ನಿರ್ದೇಶಕರು, ಪ್ರಾಂಶುಪಾಲರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸಂಯೋಜನೆಗೊಂಡಿರುವ ಎಲ್ಲಾ ಕಾಲೇಜುಗಳು.

ಪ್ರತಿಗಳು

1. ಸಮಾಜ ಕಲ್ಯಾಣ ಇಲಾಖೆ,ಸಹಾಯಕ ನಿರ್ದೇಶಕರು (ಗ್ರೇಡ್-1) ರವರ ಕಛೇರಿ ಸಮಾಜ ಕಲ್ಯಾಣ ಇಲಾಖೆ,ಬೆಂಗಳೂರು ದಕ್ಷಿಣ ತಾಲ್ಲೂಕು, ಎಸ್ ಕರಿಯಪ್ಪ ಮುಖ್ಯರಸ್ತೆ, ಬನಶಂಕರಿ, ಬೆಂಗಳೂರು-560 070.
2. ಆಪ್ತಸಹಾಯಕರು,ಕುಲಸಚಿವರು,(ಮೌ).ರಾ.ಗಾ.ಆ.ವಿ.ವಿ, ಬೆಂಗಳೂರು
3. ಉಪಕುಲಸಚಿವರು, ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್,ಫಾರ್ಮಸಿ,ನರ್ಸಿಂಗ್ , ಫಿಜಿಯೋಥೆರಪಿ ಮತ್ತು ಅಲೈಡ್ ಹೆಲ್ತ್ ಸೈನ್ಸಸ್, ರಾ.ಗಾ.ಆ.ವಿ.ವಿ, ಬೆಂಗಳೂರು
4. ನೋಡಲ್ ಅಧಿಕಾರಿ, SSP /System Analyst, ರಾ.ಗಾ.ಆ.ವಿ.ವಿ, ಬೆಂಗಳೂರು
5. ಕಛೇರಿ ಪ್ರತಿ